ಅವನ ಕೆನ್ನೆ ಹಿಂಡುತ್ತಾ 'ನೀನೂ ಬಯಲಸೀಮೆ ಭಾಶಿ ಕಲಿಯಾಕ್ ಹತ್ತಿ ಏನ, ಮಗನ' ಎಂದಳು. ಇಬ್ಬರೂ ನಕ್ಕರು. 'ಹೇ ಪ್ರೀತ್, ನಿನ್ನದು ಕರಾವಳಿ ಕನ್ನಡ, ನನ್ನದು ಬಯಲುಸೀಮೆ ಕನ್ನಡ. ಎರಡೂ ಚಂದವೇ. ಹಾಗೇ ಮೈಸೂರು ಕನ್ನಡ, ಮಂಗಳೂರು ಕನ್ನಡ ಎಲ್ಲಾ ಇವೆ... ಆದರೆ ಈ ಎಲ್ಲ ಕನ್ನಡ ನದಿಗಳು ಸೇರುವ ಕಡಲಿನಂಥ ಒಂದು ಕನ್ನಡವಿದೆ, ಯಾವ್ದು ಹೇಳು? ಅದೇ ನಮ್ಮ ಅಣ್ಣಾವ್ರ ಸಿರಿಗನ್ನಡ! ನಾವು ಇನ್ಮುಂದೆ ಆ ಸಿರಿಗನ್ನಡದಲ್ಲೇ ಮಾತಾಡೋಣ... ಓಕೆನಾ? ನಮ್ಮ ಡಾ. ರಾಜಕುಮಾರ್, ಅನಂತನಾಗ್ ಅಚ್ಚಕನ್ನಡವನ್ನು ಹೇಗೆ ಕನ್ನಡಿಗರ ಮನಸ್ಸಿಗೊಯ್ದರು ಅಲ್ವಾ... ನೀನು ಸಿನಿಮಾ ಗಿನಿಮಾ ಹೆಚ್ಚು ನೋಡಿಲ್ಲಾ, ನಂಗೊತ್ತು... ನಾನು ನಮ್ಮ ಶೈಲತ್ತೆಗೆ ಎಷ್ಟು ಋಣಿಯಾಗಿದ್ದರೂ ಸಾಲದು. ಅವಳಿಂದಾಗಿಯೇ ಹಳೆಯ ಸಿನಿಮಾಗಳನ್ನೂ ನೋಡಿದೆ... ನಿಜ ಹೇಳಬೇಂದರೆ ಆಕೆ ನನ್ನ ಹೃದಯದಲ್ಲೂರಿದ ಪ್ರೀತಿ ಬೀಜವೇ ಈ ಕಡಲತೀರದ ಹುಡುಗನ ಹೃದಯದಲ್ಲಿ ಚಿಗುರಿದೆ ಅನಿಸುತ್ತದೆ' ಎಂದು ಪ್ರೀತಂನ ಕೊರಳಿಗೆ ಜೋಲಿ ಹೊಡೆದಳು.

'ಹೇ ಪ್ರೀತ್, ನಂಗೊಂದು ಆಸೆ... ನಿನ್ನ ಜೊತೆ ದೋಣಿಲಿ ಕೂತು ಕಾಳಿನದಿಯ ಉಗಮ ಸ್ಥಾನಕ್ಕೆ ಹೋಗಬೇಕಂತ...' ಅಂದಳು. ನದಿದಾರಿಯಲ್ಲಿ ಕೊಡ್ಸಳ್ಳಿ ಡ್ಯಾಮು, ಕದ್ರಾ ಡ್ಯಾಮು ಸಿಗುತ್ತವೆ ಎಂಬುದು ಅವನಿಗೆ ಗೊತ್ತಿತ್ತು. 'ನಂಗೂ ಒಂದ್ ಆಸೆ ಇದೆ, ನದಿನಡುವೆ ದೋಣಿಯಲ್ಲಿ ಹೋಗುವಾಗ ನಿಂಗೊಂದು ಡ್ಯಾಶ್ ಡ್ಯಾಶ್ ಕೊಡಬೇಕು ಅಂತ' ಅಂದ. ಈ ಡ್ಯಾಶ್ ಡ್ಯಾಶ್ಗೆ ಕನ್ನಡದಲ್ಲಿ ಚುಂಬನ ಅಂತಾರೆ ಮಾರ್ರೆ' ಅಂದಳು. 'ಕಾರವಾರದಲ್ಲಿ ಕಿಸ್ ಅಂತಾರೆ' ಅಂದ. 'ಎರಡೂ ಬೇಡ, ಮುತ್ತು ಅಂತ ಕನ್ನಡದಲ್ಲಿ ಮುತ್ತಿನಂಥ ಶಬ್ದ ಇದೆ, ಗೊತ್ತೈತೋ ಇಲ್ಲಾ?' ಅಂದಳು. 'ಕೇಳಿದ್ದೇನೆ, ಆದ್ರೆ ಹೇಗಿರುತ್ತದೆ ಅಂತ ಅನುಭವ ಆಗಬೇಕಲ್ಲ. ತಾವು ಕರುಣೆ ತೋರಿಸಿದರೆ...' ಎಂದು ಕೈಬೆರಳನ್ನು ಅವಳ ತುಟಿಗಳ ಮೇಲಿಟ್ಟ. 'ಬೇಶರಮ್' ಎಂದು ಸುಮಿ ಅವನನ್ನು ಆಚೆ ತಳ್ಳಿದಳು.

'ಹೇ ಪ್ರೀತ್, ನಿಂಗೆ ನಾಗತಿಹಳ್ಳಿ ಚಂದ್ರಶೇಖರ್ ಅವರು ಬರೆದ ಕತೆ ಗೊತ್ತಾ? ಬಯಲು ಸೀಮೆಯಿಂದ ಒಬ್ಬ ಹುಡುಗ ಕಾರವಾರಕ್ಕೆ ಬರೋದು, ಮಲೆನಾಡಿನ ಹುಡುಗಿ ಜೊತೆ ಲವ್ ಆಗೋದು, ಮನ್ಯವ್ರು ಒಪ್ಪದೆ ಇರೋದು... ಇತ್ಯಾದಿ'

'ನಾನು ಕತೆ ಕಾದಂಬರಿಗಳನ್ನೆಲ್ಲ ಓದಿದ್ದು ಕಮ್ಮಿ ಮಾರಾಯ್ತಿ'.

'ನಿಂಗೆ ಆ ಕತೆ ಕೊಡ್ತೀನಿ, ಓದು. ನಾನು ಶೈಲತ್ತೆ ಕಾರಣದಿಂದ ಒಂದಿಷ್ಟು ಕನ್ನಡ ಸಾಹಿತ್ಯ ಓದೀನಿ. ತುಂಬಾ ಸಿನಿಮಾ ನೋಡಿನಿ'.

'ಸ್ಕೂಲಲ್ಲಿದ್ದಾಗ ಆಯಿ ಮೀನು ಮಾರಿ ಬರಲು ತಡವಾದ್ರೆ, ಇಲ್ಲೇ ಹತ್ತಿರದಲ್ಲಿದ್ದ ಲೈಬ್ರರಿಗೆ ಹೋಗ್ತಿದ್ದೆ. ಅಲ್ಲಿರುವ ಪತ್ರಿಕೆಗಳ ಮೇಲೆ ಕಣ್ಣು ಹಾಯಿಸುತ್ತಿದ್ದೆ, ಅಷ್ಟೇ'.

'ನನಗೆ ಗಜಲ್ ಅಂದ್ರೆ ಇಷ್ಟ'.

'ನಿಂಗೆ ದಿನಕರ ದೇಸಾಯಿಯವರು ಗೊತ್ತಾ? ಅವರ ನನ್ನ ದೇಹದ ಬೂದಿ... ಹೋಹೋಚೋ ಪದ್ಯಗಳನ್ನು ಕೇಳಿದ್ಯಾ?'

'ಹೌದು, ಒಂದು ಬದಿ ಕಡಲು ಒಂದು ಬದಿ ಸಹ್ಯಾದ್ರಿ. ಅದನ್ನ ಓದಿ ಅನಂತ ಸಮುದ್ರ ಮತ್ತು ಅಖಂಡ ಪರ್ವತಗಳನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಈಗ ಅಂಥ ನೆಲದಲ್ಲಿ ನಿಂತಿದ್ದೇನೆ. ಜೊತೆಗೊಬ್ಬ ನಲ್ಲನೂ!'

'ಇಲ್ಲೇ ಇನ್ನೊಮ್ಮೆ ಹುಟ್ಟುವೆನು ನಲ್ಲೆ... ಅಂತ ಒಂದು ಸಾಲುಂಟು'.

'ಈಗ ನಾನು ಜನುಮ ಜನುಮಗಳಲ್ಲೂ ನಿನ್ನ ಜೊತೆಯಲ್ಲೇ'.

ಸುಮಿ ದೂರದಲ್ಲಿ ಸೂರ್ಯಾಸ್ತ ನೋಡುತ್ತಾ ಮೌನವಾದಳು. ದಿನವಿಡೀ ಧಗಧಗ ಉರಿದ ಸೂರ್ಯ ಸಮುದ್ರ ಪ್ರವೇಶಕ್ಕೆ ಮುನ್ನ ಕೆಂಬಣ್ಣದಲ್ಲೂ ಶಾಂತ ಸ್ವರೂಪಿಯೇ ಆಗಿದ್ದ. ಹಗುರ ಸಮುದ್ರದಲ್ಲಿ ಇಳಿದು ಹೋಗುವುದು, ಆಕಾಶ ಶೂನ್ಯವಾಗುವುದು ಸುಮಿಯ ಕಣ್ಣುಗಳನ್ನು ಆರ್ದ್ರಗೊಳಿಸಿದವು. ಸನಿಹ ನಿಂತಿದ್ದ ಪ್ರೀತಂನನ್ನು ತಬ್ಬಿಕೊಂಡಳು. ಅವನ ಎದೆಯಲ್ಲಿ ಮುಖವಿಟ್ಟು 'ಲವ್ಯ ಲವ್ಯೂ' ಅಂದಳು. ಪ್ರೀತಂ ತನ್ನ ತೋಳುಗಳನ್ನು ಅವಳ ಸುತ್ತಲೂ ಬಳಸಿದ್ದ. ಅವನ ಕಣ್ಣುಗಳಲ್ಲಿ ಚಿಕ್ಕ ನಶೆ ಪಸರಿಸಿದ್ದು ಸುಮಿಗೆ ಕಾಣುತ್ತಿತ್ತು.

'ಪ್ರೀತ್, ಈ ಪ್ರೀತಿ ಅದೆಂಥ ಸುಖ ಕೊಡುತ್ತಿದೆ, ಅಲ್ವಾ! ನಮ್ಮ ಪ್ರೇಮ ದೈಹಿಕವನ್ನು ದಾಟಿ ಆತ್ಮಸಂಗಾತಕ್ಕೂ ಒಲಿಯಬೇಕು' ಎಂದಳು. 'ಹಲೋ, ಪ್ರೀತಿಯಂಥ ಪ್ರೀತಿಗೆ ಇಷ್ಟು ಭಾರವಾದ ಮಾತಿನ ಸಿಂಗಾರವೇಕೆ?' ಎಂದ. 'ಈ ಕ್ಷಣವು ಮಾತ್ರ ಸತ್ಯ, ಇರದುದರೆಡೆಗೆ ತುಡಿಯುದೆಲ್ಲವೂ ಮಿಥ್ಯ' ಎಂದು ನಕ್ಕ.

'ನೀನೂ ಪ್ರೇಮದ ಅಮಲಿನಲ್ಲಿ ರೂಮಿ ಆಗ್ತಿದ್ದಿ, ಬಿಡು' ಎಂದು ನಕ್ಕಳು.

'ರೂಮಿ? ಯೇ ರೂಮಿ–ಗೀಮಿ ಕ್ಯಾ ಹೈ?'

'ಓಹೋ, ನೀನೂ ಏಕ್ ದೂಜೆ ಕೆ ಲಿಯೇ ಸಿನಿಮಾ ಹಾಡು ಕೇಳಿದ್ದಿ ಅನ್ನು' ಅಂದಳು.

'ಸಿನಿಮಾನೂ ನೋಡಿದ್ದೇನೆ, ಹೈಸ್ಕೂಲಿನಲ್ಲಿದ್ದಾಗ... ಶೂಟಿಂಗೆಲ್ಲಾ ಗೋವಾ ಬೀಚುಗಳಲ್ಲಿ ಮಾಡಿದ್ದರಿಂದ ಇಷ್ಟವಾಗಿತ್ತು'.

'ಓಹೋ ಅಪ್ಪಡಿಯಾ?'

'ಹೇ ಸು... ನಾನು ಇಂಗ್ಲೀಷಿನಲ್ಲಿ ಕೆಲವು ಶಬ್ದ ಹೇಳ್ತೇನೆ. ಅದನ್ನು ನೀನು ಕನ್ನಡದಲ್ಲಿ ವಾಕ್ಯ ಮಾಡಬೇಕು, ಆಯ್ತಾ?'

'ಕರೆಕ್ಟ್ ಹೇಳಿದ್ರೆ ಏನ್ ಕೊಡ್ತಿಯೋ?'

'ಸರಿಯಾಗಿತ್ತು ಅಂದ್ರೆ ನಾ ಕೇಳಿದ್ದು ನೀ ಕೊಡಬೇಕು. ತಪ್ಪಾದ್ರೆ ನೀ ಕೇಳದೇ ಇದ್ರೂ ನಾನೇ ಕೊಡ್ತೇನೆ'.

'ಎರಡೂ ಒಂದೇ ಆಯ್ತಲ್ಲೋ ಕೋತಿ, ಹೋಗ್ಲಿ ಏನ್ ಕೊಡ್ತಿ?'

'ಅದು ಸೆಂಟೆನ್ಸಿನಲ್ಲೇ ಗೊತ್ತಾಗ್ತದೆ'.

'ಮಂಜೂರ್'

'ಓ ಫ್ಲಾವರ್ ಪರ್ಲ್ ಅಂಬ್ರೆಲ್ಲಾ... ಇದನ್ನ ಕನ್ನಡದಲ್ಲಿ ಅನುವಾದ ಮಾಡು'.

'ಓ ಹೂವೇ ಮುತ್ತು ಛತ್ರಿ'.

'ಹೂವಿಗೆ ಇನ್ನೊಂದು ಹೆಸರು? ಹಾಗೆ ಛತ್ರಿಗೆ ನಮ್ಕಡೆ ಏನಂತಾರೆ?'

'ಸುಮ? ಕೊಡೆ?'

'ಸುಮದಲ್ಲಿ ಮ ಸ್ವಲ್ಪ ನಾಚಿದೆ'.

'ಸುಮಿ'

'ಗ್ರೇಟ್, ಈಗ ಪೂರ್ತಿ ವಾಕ್ಯ ಮಾಡು'.

'ಓ ಸುಮಿ ಮುತ್ತು ಕೊಡೆ!'

'ಕರೆರೆರೆಕ್ಟ್... ಕೊಡು ಮತ್ತೆ!''

'ಯೂ... ತಿಂದಾಕ್ತೀನಿ ನಿನ್ನ... ಕೊಡೊಲ್ಲ ನಿಂಗೆ ಮುತ್ತು'.

'ಹ ಹ ಹಾ... ಮುತ್ತು ಕೊಡಲೇ ಬೇಕು. ಇಲ್ಲದಿದ್ರೆ ಚೀಟರ್ ಕಾಕ್ ಆಗ್ತಿಯಾ!'

'ಸರಿ, ನಂದೂ ಒಂದು ಚಾಲೆಂಜ್, ಅದ್ರಲ್ಲಿ ಪಾಸ್ ಆದ್ರೆ ಕೊಡ್ತೀನಿ, ಆಯ್ತಾ?'

'ನನ್ನ ಪ್ರೈಸ್ ಕೊಡು ಮೊದ್ಲು. ಆಮೇಲೆ ನಿನ್ನ ಸವಾಲು'.

'ಗುರು ನನ್ನ ಸವಾಲನ್ನೂ ಸ್ವೀಕರಿಸು. ಗೆದ್ರೆ ಡಬಲ್ ಸರಪ್ರೈಸು'.

'ಸರಿ, ಕೇಳು'.

'ಶಿ ಸೆಲ್ಸ್ ಸಿ ಶೆಲ್ಸ್ ಆನ್ ದ ಸಿ ಶೋರ್... ರಿಪೀಟ್ ಮಾಡು ಮರಿ'

'ಅದರಲ್ಲೇನಿದೆ?... ಶಿ ಸೆಲ್ಸ್ ಶಿ ಸೆಲ್ಸ್ ಆನ್ ದಿ ಶಿ ಶೋರ್''.

'ಹ ಹ ಹಾ ...'

'ಇನ್ನೊಮ್ಮೆ ಹೇಳ್ತೇನೆ ತಡಿ... ಶಿ ಶೆಲ್ಸ್ ಶಿ ಶೆಲ್ಸ್ ...'

'ಶಿ ಶಿ ಶೀ...'

'ಶಿ... ಸೆಲ್ಸ್... ಸಿ... ಶೆಲ್ಸ್... ಆನ್ ದಿ ಶಿ ಶೋರ್... ಸಾರಿ ಸಾರಿ... ಇನ್ನೊಮ್ಮೆ ಟ್ರೈ ಮಾಡ್ತೇನೆ'

'ಲಾಸ್ಟ್ ಚಾನ್ಸ್...'

'ಶಿ... ಸೆಲ್ಸ್... ಸಿ... ಶೆಲ್ಸ್... ಆನ್... ದಿ.. ಸಿ... ಶೋರ್...'

'ಕರೆರೆರೆಕ್ಟ್, ಗುಡ್ ಬೊಯ್'

'ಗಿಫ್ಟ್ ಎಲ್ಲಿ?'

'ಗುಡ್ ಬಾಯ್'

'ಹೇ! ಕೊಟ್ಟು ಹೋಗು ಗಿಫ್ಟು'

'ಕಣ್ಮುಚ್ಚು ಕೋತಿ'

'....'

'ಉಮಮಮಮಮ್ಮಾ....'

'ಇದು ಕೆನ್ನೆಗಾಯ್ತು, ತುಟಿಗೆ?'

'ಸದ್ಯ ಅಷ್ಟು ಸಾಕು'.

'ಲವ್ಯೂ ಅನ್ನು'.

'ಲವ್ಯೂ'.

'ಲವ್ಯೂ ಲವ್ಯೂ'.

***

ಆ ಸಂಜೆ ಕಡಲಿಂದ ಮನೆಗೆ ಬರುವುದು ಎಂದಿಗಿಂತ ತಡವಾಗಿತ್ತು. ವಿರುಪಾಕ್ಷಿ ಬಾಗಿಲಲ್ಲೇ ಕಾದು ನಿಂತಿದ್ದ. ಇವಳು 'ಹೈ ಬ್ರೋ' ಅಂದಳು. ಎಂದಿಗಿಂತ ಹೆಚ್ಚು ಲವಲವಿಕೆಯಲ್ಲಿದ್ದಳು. ವಿರುಪಾಕ್ಷಿಗೂ ಖುಶಿಯಲ್ಲಿರೋ ಸಹೋದರಿಯನ್ನು ಕಂಡೊಡನೆಯೇ ದಿನದ ಆಯಾಸವೆಲ್ಲ ಮಾಯವಾಗುತ್ತಿತ್ತು. ಇಂದು